# ಕರ್ನಾಟಕ ಸರ್ಕಾರ
## (ಕೃಷಿ ಇಲಾಖೆ)
## ಜಿಲ್ಲಾ ಪಂಚಾಯತ್ – ಚಾಮರಾಜನಗರ.
## ಭಾರತ ಸರ್ಕಾರದ ಮಾಹಿತಿ ಹಕ್ಕು ನಿಯಮ 2005ರ ಕಂಡಿಕೆ 4(1)ರ ಪ್ರಕಾರ 1 ರಿಂದ 17 ಅಂಶಗಳ ಮಾಹಿತಿ

ಜಂಟಿ ಕೃಷಿ ನಿರ್ದೇಶಕರು
ಚಾಮರಾಜನಗರ, ಚಾಮರಾಜನಗರ ಜಿಲ್ಲೆ
2010-11

**ಭಾರತ ಸರ್ಕಾರದ ಮಾಹಿತಿ ಹಕ್ಕು ಅಧಿನಿಯಮ 2005**

ಭಾರತದ ನಾಗರೀಕರಿಗೆ ಆಡಳಿತದಲ್ಲಿ ಮುಕ್ತತೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುವುದು ಮತ್ತು ಜನರು ಆಡಳಿತದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವುದು ಮಾಹಿತಿ ಹಕ್ಕು ಅಧಿನಿಯಮದ ಮುಖ್ಯ ಗುರಿಯಾಗಿರುತ್ತದೆ. ಸಂವಿಧಾದನಲ್ಲಿ ನೌಕರರಿಗೆ ಖಾತರಿಪಡಿಸಿದ ವಾಕ್ ಮತ್ತು ಅಭಿವ್ಯಕ್ತಿಯ ಹಕ್ಕಿನ ಒಂದು ಭಾಗವೆಂದು ಸರ್ವೋಚ್ಚ ನ್ಯಾಯಾಲಯ ಒಪ್ಪಿಕೊಂಡಿರುವುದರಿಂದ ಮಾಹಿತಿಯನ್ನು ಪಡೆಯುವ ಅವಕಾಶದ ಹಕ್ಕು ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯದ ಬಗ್ಗೆ ಉಪಬಂಧ ಕಲ್ಪಿಸಲು ಅಧಿನಿಯಮ ಉಪಯುಕ್ತವಾದುದಾಗಿದೆ. ಈ ಮೂಲಕ ವ್ಯವಸ್ಥೆಯನ್ನು ಅರ್ಥಪೂರ್ಣ ಮಾಡಬೇಕಾಗಿದೆ.

ಮಾಹಿತಿಯನ್ನು ಅಧಿನಿಯಮ4(1) ರ ಉಪ ನಿಯಮದ ಪ್ರಕಾರ ಈ ಕೆಳಕಂಡ ಅಂಶಗಳಿಗೆ ಸಂಬಂಧಪಟ್ಟಂತೆ ಸ್ಥೂಲ ವಿವರಣೆಯನ್ನು ವಿವರಿಸಲಾಗಿದೆ. ರಾಜ್ಯದಲ್ಲಿ ಕೃಷಿ ಇಲಾಖೆಯು ರೈತರ ಪರವಾಗಿ ಅನೇಕ ಜನಪ್ರಿಯ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಬೀಜ, ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಬೇಡಿಕೆ/ವಿತರಣೆ ಮೇಲ್ವಿಚಾರಣೆ ಹಾಗೂ ಉಸ್ತುವಾರಿ ಮತ್ತು ಸಮನ್ವಯ ಮಾಡುವುದು, ಜಿಲ್ಲಾ ಮಟ್ಟದಲ್ಲಿ ಪರಿಕರಗಳ ಗುಣಮಟ್ಟ ನಿಯಂತ್ರಣ, ಕೃಷಿ ವಿಸ್ತರಣಾ ಕಾರ್ಯಕ್ರಮದ ಅನುಷ್ಠಾನ, ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನ ಬೆಳೆಗಳ ಸಂಖ್ಯಿಕ ಮಾಹಿತಿ ಹಾಗೂ ಹವಾಮಾನ ವಿವರಗಳನ್ನು ಪರಿಗಣಿಸಿ ರೈತರಿಗೆ ಸಲಹೆ ನೀಡುವುದು ಇತ್ಯಾಧಿಗಳು ಇಲಾಖೆಯ ಮುಖ್ಯ ಗುರಿಗಳಾಗಿರುತ್ತವೆ. ಬೆಳೆ ಸ್ಪರ್ಧೆ, ಹವಾಮಾನ ವರದಿ, ಬೆಳೆ ವಿಸ್ತೀರ್ಣ, ಬೆಳೆ ಸ್ಥಿತಿ, ಉತ್ಪಾದನೆ ಇಳುವರಿ, ಸುಧಾರಿತ ಬೇಸಾಯ ಪದ್ಧತಿಗಳು ಪರ್ಯಾಯ ಬೆಳೆ ಯೋಜನೆಗಳ ಬಗ್ಗ ರೈತರಿಗೆ ಮಾಹಿತಿ ನೀಡಲಾಗುತ್ತಿದೆ.

**ಮಾಹಿತಿ ಹಕ್ಕು ಅಧಿನಿಯಮ–4(1) ರ ಪ್ರಕಾರ 1 ರಿಂದ 17 ಅಂಶಗಳ ಮಾಹಿತಿ**:

(1) **ಕಛೇರಿಯ ಪೂರ್ಣ ವಿವರ– ನಿರ್ವಹಿಸುವ ಕೆಲಸ–ಕಾರ್ಯಗಳು**.

1. ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ (ಜಿಲ್ಲಾ ಆಡಳಿತ ಭವನ)
2. ಬೀಜ, ರಾಸಾಯನಿಕ ಗೊಬ್ಬರ ಹಾಗೂ ಕೀಟನಮಾಶಕಗಳ ಬೇಡಿಕೆ/ವಿತರಣೆ ಮೇಲ್ವಿಚಾರಣೆ ಹಾಗೂ ಉಸ್ತುವಾರಿ
3. ಜಿಲ್ಲಾ ಮಟ್ಟದಲ್ಲಿ ಪರಿಕರಗಳ ಗುಣಮಟ್ಟ ನಿಯಂತ್ರಣ
4. ಕೃಷಿ ವಿಸ್ತರಣೆ ಕಾರ್ಯಕ್ರಮದ ಉಸ್ತುವಾರಿ
5. ಕೇಂದ್ರ ಸರ್ಕಾರ ರಾಜ್ಯ ಸರ್ಕಾರ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳಲ್ಲಿನ ವಿವಿಧ ಯೋಜನೆಗಳ ಅನುಷ್ಠಾನ
6. ಬೀಜ, ಸಗಟುಗೊಬ್ಬರ ಮಾರಾಟ, ಕೀಟನಾಶಕ ಮಾರಾಟ ಪರವಾನಗಿ ಕೊಡುವುದು
7. ಅಧೀನ ಕಾರ್ಯಾಲಯಗಳ ಕಾರ್ಯನಿರ್ವಹಣೆಯ ಉಸ್ತುವಾರಿ
8. ಕಛೇರಿ ಕೈಪಿಡಿಯಂತೆ ಕಛೇರಿ ಕಾರ್ಯನಿರ್ವಹಣೆ

(2) **<u>ಅಧಿಕಾರಿ ಹಾಗೂ ನೌಕರರ ಅಧಿಕಾರ ಮತ್ತು ಕರ್ತವ್ಯಗಳು</u>**:

ಅ) **ಜಂಟಿ ಕೃಷಿ ನಿರ್ದೇಶಕರು:** ಕಛೇರಿಯ ಮುಖ್ಯಸ್ಥರು, ಹಣ ಸೆಳೆಯುವ ಬಟವಾಡೆ ಅಧಿಕಾರಿ
ಕಛೇರಿ ಮತ್ತು ಅಧೀನ ಕಛೇರಿಗಳ ಕಾರ್ಯನಿರ್ವಹಣೆಯ ಉಸ್ತುವಾರಿ
ಕೃಷಿ ವಿಸ್ತರಣಾ ಕಾರ್ಯಕ್ರಮದ ಅನುಷ್ಠಾನ, ವಿವಿಧ ಯೋಜನೆಗಳ ಅನುಷ್ಠಾನ, ಬೀಜ, ಸಗಟುಗೊಬ್ಬರ,
ಕೀಟನಾಶಕ ಮಾರಾಟ ಪರವಾನಗಿ ನೀಡುವುದು ಇತ್ಯಾಧಿ.

ಆ) **ಸಹಾಯಕ ಕೃಷಿ ನಿರ್ದೇಶಕರು(ಕೇಂದ್ರ):** ಕಛೇರಿಯ ಮುಖ್ಯಸ್ಥರ ಸಹಾಯಕರಾಗಿ ಕಾರ್ಯನಿರ್ವಹಿಸುವುದು, ಕೇಂದ್ರಸ್ಥಾನಲ್ಲಿದ್ದು ಕಛೇರಿ ಕಾರ್ಯನಿರ್ವಹಣೆಯ ಪೂರ್ಣ ಉಸ್ತುವಾರಿ, ತಾಂತ್ರಿಕ ಸಲಹೆ/ ಇಲಾಖಾ ಕಾರ್ಯಕ್ರಮಗಳ ಅನುಷ್ಠಾನ, ಕೃಷಿ ಪರಿಕರ ವ್ಯವಸ್ಥೆ ಇತ್ಯಾಧಿ, ಸಾರ್ವಜನಿಕ ಕುಂದು ಕೊರತೆ ಅರ್ಜಿಗಳ ವಿಲೇವಾರಿ.

ಇ) **ಸಹಾಯಕ ಕೃಷಿ ನಿರ್ದೇಶಕರು(ವಿ.ತ):** ಬೀಜ ಮಣ್ಣು ಮಾದರಿ ಪರೀಕ್ಷೆ, ಗುಣ ನಿಯಂತ್ರಣ, ಲಘು ಪೋಷಕಾಂಶಗಳ ವಿಶ್ಲೇಷಣೆ, ಪ್ರಾತ್ಯಕ್ಷಿಕೆಗಳ ಮೇಲ್ವಿಚಾರಣೆ, ಕೃಷಿ ಪರಿಕರಗಳ ಪೂರೈಕೆ, ತಾಂತ್ರಿಕ ಸಲಹೆ ನೀಡುವುದು, ಕ್ಷೇತ್ರ ಪರಿಶೀಲನೆ ವಿವಿಧ ಕಾರ್ಯಕ್ರಮಗಳ ಮೇಲ್ವಿಚಾರಣೆ ಮತ್ತು ಅನುಷ್ಠಾನ.

ಈ) **ಆಡಳಿತಾಧಕಾರಿ:** ಕಛೇರಿಯ ಆಡಳಿತ ಮುಖ್ಯಸ್ಥರು, ಸಿಬ್ಬಂದಿ ಮತ್ತು ಲೆಕ್ಕ ವಿಭಾಗದ ಕೆಲಸ-ಕಾರ್ಯಗಳ ಉಸ್ತುವಾರಿ ಮತ್ತು ನಿರ್ವಹಣೆ, ಕಛೇರಿ ಕೈಪಿಡಿಯ ಪ್ರಕಾರ ಕಛೇರಿ ಕೆಲಸ, ಮೇಲ್ವಿಚಾರಣೆ, ಸಾರ್ವಜನಿಕ ಕುಂದು ಕೊರತೆ ನಿವಾರಣೆ ಕೆಲಸ-ಕಾರ್ಯ, ಉತ್ತಮ ಆಡಳಿತಕ್ಕೆ ಸಂಬಂಧಪಟ್ಟಂತೆ ಕರ್ತವ್ಯ ಮತ್ತು ಹೊಣೆಗಾರಿಕೆ ನಿರ್ವಹಣೆ, ಪಾರದರ್ಶಕತೆಗೆ ಹೆಚ್ಚಿನ ಆಧ್ಯತೆ, ಅಧೀನ ಕಾರ್ಯಾಲಯಗಳ ಪರಿಶೀಲನೆ.

ಉ) **ಆಧೀಕ್ಷಕರು**: ಕಛೇರಿ ಕೈಪಿಡಿಯಂತೆ ಕಛೇರಿಯ ಕೆಲಸ ಕಾರ್ಯ ನಿರ್ವಹಣೆ, ವಿಷಯ ನಿರ್ವಾಹಕರುಗಳ ಕಡತ ಪರಿಶೀಲನೆ, ಮೇಲ್ವಿಚಾರಣೆ, ಶೀಘ್ರ ಕಡತ ವಿಲೇವಾರಿಗೆ ಅಗತ್ಯ ಕಮ್ರ, ಆಡಳಿತಾತ್ಮಕ ಮತ್ತು ಲೆಕ್ಕ ವಿಭಾಗದ ಕೆಲಸ-ಕಾರ್ಯಕಾರ್ಯಗಳನ್ನು ನಿಯಮಾನುಸಾರ ನಿರ್ವಹಿಸುವುದು.

ಊ) **ಪ್ರಥಮ ದರ್ಜೆ ಸಹಾಯಕರು**: ಕಛೇರಿ ಕೈಪಿಡಿಯಂತೆ ಹಂಚಿಕೆ ಮಾಡಿರುವ ಸಿಬ್ಬಂದಿ ಮತ್ತು ಲೆಕ್ಕ ವಿಭಾಗದ ಕೆಲಸ.

ಋ) **ದ್ವಿತೀಯ ದರ್ಜೆ ಸಹಾಯಕರು**: ಕೆಲಸ ಕಾರ್ಯಗಳನ್ನು ನಿರ್ವಹಿಸುವುದು. ಕಡತಗಳ ಚಾಲನೆ, ಪರಿಶೀಲನೆ, ವಿಲೇವಾರಿಗೆ ಕಾಲಕಾಲಕ್ಕೆ.

ಎ) **ಶೀಘ್ರಲಿಪಿಗಾರರು**: ಅಗತ್ಯ ಕ್ರಮಕೈಗೊಂಡು ವರದಿಗಳನ್ನು ಸಲ್ಲಿಸುವುದು ಇತ್ಯಾಧಿ ಕೆಲಸಗಳ ನಿರ್ವಹಣೆ.

ಏ) **ಬೆರಳಚ್ಚುಗಾರರು**: ಬೆರಳಚ್ಚು ವಿಭಾಗ/ ಕಂಪ್ಯೂಟರ್ ವಿಭಾಗದ ಕೆಲಸ-ಕಾರ್ಯಗಳನ್ನು ನಿರ್ವಹಿಸುವುದು.

ಐ) **ವಾಹನ ಚಾಲಕರು**: ಕಛೇರಿಯ ವಾಹನ ಸುವ್ಯವಸ್ಥೆಯಲ್ಲಿಟ್ಟುಕೊಂಡು ಚಲಿಸುವುದು ಮತ್ತು ಇತರೆ ಕೆಲಸಗಳು ನಿರ್ವಹಿಸುವುದು.

ಒ) **ಗ್ರೂಪ್ 'ಡಿ'ನೌಕರರು:**ಕಛೇರಿ ಕೆಲಸ/ಸ್ವಚ್ಛತಾ ಕಾರ್ಯ/ ಟಪಾಲು ವಿತರಣೆ ಮುಂತಾದ ಕೆಲಸ-ಕಾರ್ಯಗಳನ್ನು ನಿರ್ವಹಿಸುವುದು.

.........4

(3) **ಕಛೇರಿಯಲ್ಲಿ ಅನುಸರಿಸುತ್ತಿರುವ ವಿಧಿ ವಿಧಾನಗಳು, ವಿವಿಧ ಹಂತಗಳ ಹೊಣೆಗಾರಿಕೆ:** ಕಛೇರಿಗೆ ಬಂದ ಪತ್ರ, ಅರ್ಜಿ ಇತ್ಯಾಧಿ ಕಾಗದಗಳನ್ನು ಮುಖ್ಯ ಅಧಿಕಾರಿಯು ನೋಡಿ ಸಂಬಂಧಿಸಿದ ಶಾಖೆಗಳಿಗೆ ಕಳುಹಿಸಲಾಗುತ್ತದೆ. ಆಯಾಯ ಶಾಖೆಯ ಮುಖ್ಯಸ್ಥರು ಆಯಾಯ ಕಾಗದದ ವಿಷಯವನ್ನು ಪರಿಶೀಲಿಸಿ ಶಾಖೆಯಲ್ಲಿ ಕಾರ್ಯಹಂಚಿಕೆಗೆ ಅನುಗುಣವಾಗಿ ಅದನ್ನು ಆಯಾಯ ವಿಷಯ ನಿರ್ವಾಹಕರಿಗೆ ಒಪ್ಪಿಸಲಾಗುದು. ವಿಷಯ ನಿರ್ವಾಹಕರು ವಿಷಯವನ್ನು ಕುರಿತು ಚಿಂತಿಸಿ ಸಂಬಂಧಪಟ್ಟ ಕಾಗದ ಪತ್ರಗಳಗಳನ್ನು ಪರಿಶೀಲಿಸಿ ಕಡತದ ಪ್ರಸ್ತಾವನೆಯನ್ನು ಕೂಲಂಕಷವಾಗಿ ಸಂಬಂದಿಸಿದ ನೀತಿ, ನಿಯಮ, ಆದೇಶ ಮೊದಲಾದವುಗಳನ್ನು ಉಲ್ಲೇಖಿತ ಮೇಲಧಿಕಾರಿಗಳ ಆದೇಶಕ್ಕೆ ಕಳುಹಿಸಿಕೊಡುತ್ತಾನೆ. ಹೀಗೆ ಕಡತದ ಚಾಲನೆ ಪ್ರಾರಂಭವಾಗಿ ಶಾಖಾಧಿಕಾರಿಗೆ ಗೆಜೆಟೆಡ್ ಸಹಾಯಕ/ನಿರ್ವಹಣಾಧಿಕಾರಿ, ಕಛೇರಿ ಮುಖ್ಯಸ್ಥರಿಗೆ ಕಳುಹಿಸಿ ವಿಷಯದ ತೀರ್ಮಾನವಾಗುವವರೆಗೆ ಸಾಗತ್ತದೆ. ತೀರ್ಮಾನದ ಬಳಿಕ ಕರಡು ಮೇಲೆ ಹೋಗಿ, ಸಮ್ಮತಿ ಪಡೆದು, ಸಕ್ಷಮ ಅಧಿಕಾರಿಯ ಸಹಿಪಡೆದು ಸಂಬಂದಪಟ್ಟ ಶಾಖೆಗೆ ಹಿಂತಿರುಗುತ್ತದೆ. ನಂತರ ರವಾನೆ ಶಾಖೆಗೆ ಕಳುಹಿಸಲಾಗುವುದು. ಇದು ಕಡತದ ಚಲನೆಯ ವಿವಿಧ ಹಂತಗಳ ಹೊಣೆಗಾರಿಕೆಯಾಗಿದ್ದು, ಪ್ರತಿಯೊಂದು ಪ್ರಕರಣದಲ್ಲೂ ಇದೇ ಕ್ರಮವನ್ನು ಅನುಸರಿಸಲಾಗುವುದು. ಪ್ರತಿಯೊಂದು ಹಂತದಲ್ಲೂ ಸಂಬಂಧಪಟ್ಟ ನೌಕರರು/ಅಧಿಕಾರಿ ವರ್ಗ ಹೊಣೆಗಾರಿಕೆಯನ್ನು ನಿರ್ವಹಿಸಬೇಕಾಗಿದೆ.

(4) **ಕಾರ್ಯಕ್ರಮಗಳ ಅನುಷ್ಠಾನ**: ಕೃಷಿ ಇಲಾಖಾ ಕಾರ್ಯಕ್ರಮಗಳು, ಕೃಷಿ ವಿಸ್ತರಣಾ ಕಾರ್ಯಕ್ರಮಗಳು, ಕೇಂದ್ರ ಸರ್ಕಾರ/ರಾಜ್ಯ ಸರ್ಕಾರ/ ಜಿಲ್ಲಾ ಪಂಚಾಯತ್/ ತಾಲ್ಲೂಕು ಪಂಚಾಯತ್, ಕಾರ್ಯಕ್ರಮಗಳನ್ನು ಇಲಾಖಾ ಮಾರ್ಗಸೂಚಿಯನುಸಾರ, ಸರ್ಕಾರಿ ಆದೇಶಗಳು ನಿಯಮಗಳು ಸುತ್ತೋಲೆಗಳಂತೆ ಅನುಷ್ಠಾನಗೊಳಿಸಬೇಕಾಗಿದ್ದು, ತಾಲ್ಲೂಕುಮಟ್ಟದ್ದ ಸಹಾಯಕ ಕೃಷಿ ನಿರ್ದೇಶಕರುಗಳು, ಅನುಷ್ಠಾನಾಧಿಕಾರಿಗಳಿದ್ದು, ಜಂಟಿ ಕೃಷಿ ನಿರ್ದೇಶಕರು ನಿಯಂತ್ರಣಾಧಿಕಾರಿಗಳಾಗಿ ಕಾರ್ಯನಿರ್ವಹಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸುವುದು. ಬೀಜ, ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಬೇಡಿಕೆ,ವಿತರಣೆ ಮೇಲ್ವಿಚಾರಣೆ, ಗುಣ ನಿಯಂತ್ರಣ ಕಾರ್ಯಕ್ರಮ, ರೈತರಿಗೆ ಆಧುನಿಕ ತಂತ್ರಜ್ಞಾನ ಒದಗಿಸುವುದು ಪರಿಕರಗಳ ವ್ಯವಸ್ಥೆ ಇತ್ಯಾಧಿ ಕಾರ್ಯಕ್ರಮ ಅನುಷ್ಠಾನಗೊಳಿಸುವುದು ಆಧ್ಯ ಕರ್ತವ್ಯವಾಗಿರುತ್ತದೆ.

(5) **ಕಛೇರಿಯಲ್ಲಿ ಅನುಸರಿಸಲಾಗುತ್ತಿರುವ ನಿಯಮಗಳು/ಅಧಿಸೂಚನೆ/ನಿರ್ದೇಶನ ಮತ್ತು ಆದೇಶಗಳು**:

- ಕರ್ನಾಟಕ ಸರ್ಕಾರಿ ಸೇವಾ ನಿಯಮಗಳು(KCSRs)
- ಕರ್ನಾಟಕ ಆರ್ಥಿಕ ಸಂಹಿತೆ(KFC)
- ಕರ್ನಾಟಕ ಖಜಾನೆ ಸಂಹಿತೆ(KTC)
- ಸಾದಿಲ್ವಾರು ವೆಚ್ಚ ಕೈಪಿಡಿ(NCE)
- ಕರ್ನಾಟಕ ಬಜೆಟ್ ಕೈಪಿಡಿ(KBM)
- ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಕೈಪಿಡಿ
- ಕಛೇರಿ ಕಾರ್ಯವಿಧಾನ ಕೈಪಿಡಿ
- ಇಲಾಖೆ ಮತ್ತು ಆರ್ಥಿಕ ಇಲಾಖೆ ಹೊರಡಿಸಿರುವ ಡೇಲಿಗೇಷನ್ ಆಫ್ ಪವರ್ಸ್.

.........5

- ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ/ಜಿಲ್ಲಾ ಪಂಚಾಯತ್ ಆದೇಶಗಳು, ಸುತ್ತೋಲೆಗಳು, ಇಲಾಖಾ ಸುತ್ತೋಲೆಗಳು ಮತ್ತು ಮಾರ್ಗಸೂಚಿಗಳು.
- ಇಲಾಖಾ ಸುತ್ತೋಲೆಗಳು ಮತ್ತು ಮಾರ್ಗಸೂಚಿಗಳು
- ಸರ್ಕಾರದ ಅಧಿಸೂಚನೆಗಳು/ಆದೇಶಗಳು, ಸುತ್ತೋಲೆಗಳು
- ಕೀಟನಾಶಕ ಅಧಿನಿಯಮ, ಬೀಜ ನಿಯಂತ್ರಣ ಅಧಿನಿಯಮ, ರಸಗೊಬ್ಬರ ನಿಯಂತ್ರಣ ಅಧಿನಿಯಮ.

(6) **ನಿರ್ಣಯ ಕೈಗೊಳ್ಳುವಲ್ಲಿ ಹಾಗೂ ಯೋಜನೆಗಳ ನಿರ್ವಹಣೆಯಲ್ಲಿ ಸಾರ್ವಜನಿಕ ಸಹಭಾಗತ್ವ:**

1. ಪ್ರತಿ ಹೋಬಳಿಯಲ್ಲಿ ರೈತ ಸಂಪರ್ಕ ಕೇಂದ್ರ ಸ್ಥಾಪನೆಯಾಗಿದ್ದು, ಸಲಹೆಗಳನ್ನು ನೀಡಲು ವ್ಯವಸ್ಥೆ ಮಾಡಿದೆ.
2. ವಿವಿಧ ಬೆಳೆಗಳ ಬಿತ್ತನೆ ಬೀಜಗಳನ್ನು ರೈತರಿಂದ ಬೇಡಿಕೆಯನ್ನು ಮುಂಗಡವಾಗಿ ಪಡೆದು ವಿವಿಧ ಸಂಸ್ಥೆಗಳು, ಕರ್ನಾಟಕ ರಾಜ್ಯ ಬೀಜ ನಿಗಮ ಮೂಲಕ ರೈತ ಸಂಪರ್ಕ ಕೇಂದ್ರಗಳಲ್ಲಿ ರಿಯಾಯಿತಿಯಲ್ಲಿ ಮಾರಾಟದ ವ್ಯವಸ್ಥೆ ಮಾಡಿದೆ.
3. ಕೀಟನಾಶಕಗಳನ್ನು ರಿಯಾಯಿತಿ ದರದಲ್ಲಿ ಮಾರಾಟದ ವ್ಯವಸ್ಥೆ ಮಾಡಿದೆ.
4. ಕೃಷಿ ಉಪಕರಣಗಳು, ಕೃಷಿ ಯಾಂತ್ರೀಕರಣ ಉಪಕರಣಗಳು, ಲಘು ನೀರಾವರಿ ಉಪಕರಣಗಳನ್ನು ರಿಯಾಯಿತಿಯಲ್ಲಿ ರೈತರ ಬೇಡಿಕೆಗೆ ಅನುಗುಣವಾಗಿ ವಿತರಣೆಮಾಡಲು ವ್ಯವಸ್ಥೆ ಮಾಡಿದೆ.

(7) **ಕಛೇರಿಗೆ ಬೋರ್ಡು/ಕೌನ್ಸಿಲ್ ಮತ್ತು ಕಮಿಟಿಗಳ ವಿವರ:**

| ಕ್ರ.ಸಂ | ಸಮಿತಿ | ಅಧ್ಯಕ್ಷರು/ಸದಸ್ಯರುಗಳು | ಸಭೆಯಲ್ಲಿ ಚರ್ಚಿಸುವ ವಿಷಯ |
|---|---|---|---|
| 1 | ಕೃಷಿ ಪ್ರಶಸ್ತಿ ಯೋಜನೆಯ ಸಮಿತಿ | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು – ಅಧ್ಯಕ್ಷರು<br>ಜಿಲ್ಲಾ ಪಂಚಾಯತ್, ಚಾಮರಾಜನಗರ. | ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಬೆಳೆ ಸ್ಪರ್ಧೆ ವಿಜೇತರನ್ನು ಆಯ್ಕೆ ಮಾಡುವುದು. |
| | | ಉಪ ಕಾರ್ಯದರ್ಶಿ (ಅಭಿವೃದ್ಧಿ)<br>ಜಿಲ್ಲಾ ಪಂಚಾಯತ್, ಚಾಮರಾಜನಗರ – ಸದಸ್ಯರು | |
| | | ಜಿಲ್ಲಾ ಸಾಂಖ್ಯಿಕ ಅಧಿಕಾರಿ<br>ಅಧ್ಯಕ್ಕರು, ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ<br>ಜಿಲ್ಲಾ ಪಂಚಾಯತ್, ಚಾಮರಾಜನಗರ. – ಸದಸ್ಯರು | |
| | | ಜಂಟಿ ಕೃಷಿ ನಿರ್ದೇಶಕರು – ಸದಸ್ಯ ಕಾರ್ಯದರ್ಶಿ | |

.........6

| | | | |
|---|---|---|---|
| 2 | ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿ ಜಿಲ್ಲಾ ಮಟ್ಟದ ಉಸ್ತುವಾರಿ ಸಮಿತಿ | ಜಿಲ್ಲಾಧಿಕಾರಿಗಳು – ಅಧ್ಯಕ್ಷರು | |
| | | ಮುಖ್ಯ ಕಾರ್ಯನಿರ್ವಾಹಕಧಿಕಾರಿಗಳು ಜಿಲ್ಲಾ ಪಂಚಾಯತ್, ಚಾಮರಾಜನಗರ – ಅಧ್ಯಕ್ಷರು | ಜಿಲ್ಲೆಯಲ್ಲಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆ ಅನುಷ್ಠಾನದ ಬಗ್ಗೆ ಪರಿಶೀಲನೆ. |
| | | ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ – ಸದಸ್ಯರು | |
| | | ಜಿಲ್ಲಾ ಸಾಂಖ್ಯಿಕ ಅಧಿಕಾರಿ – ಸದಸ್ಯರು | |
| | | ವ್ಯವಸ್ಥಾಪಕರು, ಲೀಡ್ ಬ್ಯಾಂಕ್ – ಸದಸ್ಯರು | |
| | | ಭಾರತೀಯ ಕೃಷಿ ವಿಮಾ ನಿಗಮದ ಪ್ರತಿ ನಿಧಿ – ಸದಸ್ಯರು | |
| | | ಡಿ.ಸಿ.ಸಿ. ಬ್ಯಾಂಕ್ ಪ್ರತಿನಿಧಿಗಳು – ಸದಸ್ಯರು | |
| | | ಜಂಟಿ ಕೃಷಿ ನಿರ್ದೇಶಕರು – ಸದಸ್ಯ ಕಾರ್ಯದರ್ಶಿ | |

**8) ಜಿಲ್ಲಾ ಮಟ್ಟದ ಕಛೇರಿಯಾದ ಜಂಟಿ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರ ತ:ಖ್ತೆ.**

**9) ಅಧಿಕಾರಿ/ನೌಕರರು ಪಡೆಯುತ್ತಿರುವ ಮಾಸಿಕ ವೇತನ ಅಧಿಕಾರಿ/ನೌಕರರ ಹೆಸರು ಮಾರ್ಚ್–2011 ರಲ್ಲಿರುವಂತೆ**

| ಕ್ರ.ಸಂ | ಅಧಿಕಾರಿ/ನೌಕರರ ಹೆಸರು | ಹುದ್ದೆ | ಒಟ್ಟು ವೇತನ(ರೂ.) |
|---|---|---|---|
| 1 | ಬಿ.ಎಂ.ಶಿವಮಲ್ಲು | ಜಂಟಿ ಕೃಷಿ ನಿರ್ದೇಶಕರು | 46159 |
| 2 | ಶ್ರೀಮತಿ ಸುಂದರಮ್ಮ | ಸಹಾಯಕ ಕೃಷಿ ನಿರ್ದೇಶಕರು(ರೈ.ಮ) | 26773 |
| 3 | ಸಿ.ಸಿದ್ದಾಚಾರಿ | ಸಹಾಯಕ ಕೃಷಿ ಅಧಿಕಾರಿ(ತಾ.ಸ) | 30750 |
| 4 | ಆರ್.ಎಂ.ಪುಟ್ಟಮಾದಯ್ಯ | ಪ್ರಥಮ ದರ್ಜೆ ಸಹಾಯಕರು | 20352 |
| 5 | ಜಿ.ಸಿ.ಶ್ರೀನಿವಾಸನ್ | ಪ್ರಥಮ ದರ್ಜೆ ಸಹಾಯಕರು | 17881 |
| 6 | ರಾಜೀವ್ | ಪ್ರಥಮ ದರ್ಜೆ ಸಹಾಯಕರು | 12760 |
| 7 | ಎನ್ ಸೋಮಶೇಖರ್ | ಪ್ರಥಮ ದರ್ಜೆ ಸಹಾಯಕರು | 12760 |
| 8 | ಎಂ.ಗಿರೀಶ | ದ್ವಿತೀಯ ದರ್ಜೆ ಸಹಾಯಕರು | 9682 |
| 9 | ನಾಗಪ್ಪ | ದ್ವಿತೀಯ ದರ್ಜೆ ಸಹಾಯಕರು | 9332 |
| 10 | ಶಿವಕುಮಾರ ಎಸ್ ಮುದಿಗೌಡ್ರ | ದ್ವಿತೀಯ ದರ್ಜೆ ಸಹಾಯಕರು | 9682 |
| 11 | ಪಿ.ಸಿ.ಹರಿಣಿಬಾಯಿ | ಶೀಘ್ರಲಿಪಿಗಾರರು | 11381 |
| 12 | ಶ್ರೀಮತಿ.ಅನುಸೂಯ ಪ್ರಭಾಮಣಿ | ಬೆರಳಚ್ಚುಗಾರರು | 20517 |
| 13 | ಬಿ. ಮಹದೇವ | ವಾಹನ ಚಾಲಕರು | 15549 |
| 14 | ಗುರುಸಿದ್ದಯ್ಯ | ಡಿ ದರ್ಜೆ ನೌಕರರು | 12684 |
| 15 | ಡಿ.ಎಂ. ಗೋವಿಂದನಾಯ್ಕ | ಡಿ ದರ್ಜೆ ನೌಕರರು | 10357 |
| 16 | ಬಿ. ನಾಗರಾಜು | ಡಿ ದರ್ಜೆ ನೌಕರರು | 9092 |

.........7

**ಖಾಲಿ ಹುದ್ದೆಗಳು: ಮಾರ್ಚ್–2010 ರಲ್ಲಿರುವಂತೆ**

| ಕ್ರ.ಸಂ | ಅಧಿಕಾರಿ/ನೌಕರರ ಹೆಸರು | ಹುದ್ದೆ | ಒಟ್ಟು ವೇತನ(ರೂ.) |
|---|---|---|---|
| 17 | ಆಡಳಿತಾಧಿಕಾರಿ | 1 | (14050-25050) |
| 18-20 | ಕೃಷಿ ಅಧಿಕಾರಿ | 4 | (11400-21600) |
| 21 | ಅಧೀಕ್ಷಕರು | 2 | (10000-18150) |
| 22 | ಬೆರಳಚ್ಚುಗಾರರು | 1 | (7275-13350) |

ಮಂಜೂರಾದ ಹುದ್ದೆಗಳ ಸಂಖ್ಯೆ – 28
ಭರ್ತಿಯಾದ ಹುದ್ದೆಗಳ ಸಂಖ್ಯೆ – 16
ಖಾಲಿ ಇರುವ ಹುದ್ದೆಗಳ ಸಂಖ್ಯೆ – 12

**ಷರಾ: ಸರ್ಕಾರಿ ನಿಯಮಗಳಚಿತೆ ಗಳಿಕೆ ರಜೆ ನಗಧೀಕರಣ/ವೈದ್ಯಕೀಯ ವೆಚ್ಚ/ ರಜಾ ಪ್ರಯಾಣ ಸೌಲಭ್ಯ/ಪ್ರಯಾಣ ಭತ್ಯೆ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.**

**10) ಕಾದಿರಿಸಿದ ಅನುದಾನ– ನಿರೀಕ್ಷಿತ ವೆಚ್ಚ ವಿವರ 2010–11 ನೇ ಸಾಲಿಗೆ ಸಂಬಂಧಿಸಿದಂತೆ.**

| ಕ್ರ.ಸಂ | ಯೋಜನೆಗಳು | ಅನುದಾನ | ನಿರೀಕ್ಷಿತ ವೆಚ್ಚ |
|---|---|---|---|
| 1 | ರಾಜ್ಯ ವಲಯ ಯೋಜನೆಗಳು | 837.08 | 823.16 |
| 2 | ಜಿಲ್ಲಾ ವಲಯ ಯೋಜನೆಗಳು(ಕೇಂದ್ರ ಪುರಸ್ಕೃತ ಯೋಜನೆಗಳು 103.860 ಸೇರಿದಂತೆ ಒಟ್ಟು ಕಾರ್ಯಕ್ರಮ) | 175.16 | 162.29 |
| 3 | ತಾಲ್ಲೂಕು ಪಂಚಾಯತ್ ಯೋಜನೆಗಳು | | |
| 4 | ವಿಶೇಷ ಘಟಕ ಯೋಜನೆ(ತಾ.ಪ) | 11.27 | 11.25 |
| 5 | ಗಿರಿಜನ ಉಪ ಯೋಜನೆ(ತಾ.ಪ) | 3.10 | 3.09 |

**2010–11 ನೇ ಸಾಲಿನಲ್ಲಿರುವಂತೆ ಈ ಕಛೇರಿಯ ಮತ್ತು ಅಧೀನ ಕಛೇರಿಗಳ ವೇತನ ಭತ್ಯೆ.**

| ಕ್ರ.ಸಂ | ಯೋಜನೆಗಳು | ಲೆಕ್ಕಶೀರ್ಷಿಕೆ | ಅನುದಾನ (ರೂಗಳಲ್ಲಿ) |
|---|---|---|---|
| 1 | ರಾಜ್ಯ ವಲಯ ವೇತನ–ಭತ್ಯೆ | 2401-00-109-0-80 (NP) | 623317 |
| | | 2401-00-104-0-10 (NP) | 114551 |
| 2 | ಜಿಲ್ಲಾ ಪಂಚಾಯತ್ ವೇತನ–ಭತ್ಯೆ | 2401-00-001-1-03 (NP) | 8915517 |
| | | 2401-00-109-0-62 (NP) | 498382 |
| 3 | ತಾಲ್ಲೂಕು ಪಂಚಾಯತ್ ವೇತನ–ಭತ್ಯೆ | 2401-00-001-1-04 (NP) | 3058249 |

.........8

**11. ಸಹಾಯ ಧನ ಕಾರ್ಯಕ್ರಮಗಳ ಅನುಷ್ಠಾನದ ರೀತಿ/ಒಟ್ಟು ಸಹಾಯ ಧನ ಮೊತ್ತ ಫಲಾನುಭಫಿಗಳ ವಿವರಗಳು**

ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಸದಸ್ಯರುಗಳ ಆಯ್ಕೆಯಾದ ರೈತರುಗಳಿಗೆ ಹಾಗೂ ರೈತರ ಬೇಡಿಕೆಗಳನ್ನು ಪರಿಶೀಲಿಸಿ ಸಹಾಯ ಧನಗಳ/ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಮಾಡಲಾಗುವುದು. ಫಲಾನುಭವಿಗಳ ವಿವರಗಳನ್ನು ಪ್ರಕಟಿಸಲು ಕ್ರಮವಹಿಸಲಾಗುವುದು.

**12. 2010–11 ನೇ ಸಾಲಿನ ಸಹಾಯ ಧನ ನೀಡಿಕೆ/ಕಾರ್ಯಕ್ರಮದ ವಿವರ**

**ಜಿಲ್ಲಾ ವಲಯ**

| ಕ್ರ.ಸಂ | ಯೋಜನೆಗಳು(ಜಿಲ್ಲಾ ವಲಯ) | ವಾರ್ಷಿಕ ಗುರಿ (ಆರ್ಥಿಕ) | ಭೌತಿಕ ಗುರಿ | ಫಲಾನುಭವಿ ಗಳ ಸಂಖ್ಯೆ | ಷರಾ |
|---|---|---|---|---|---|
| 1 | ವೇಗವರ್ಧಕ ಮುಸುಕಿನ ಜೋಳ(ISOPAM) | 10.18 | 1415 | 1551 | ಶೇ 50 ರ ಸಹಾಯಧನದಲ್ಲಿ ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆ, ಜೈವಿಕ ಗೊಬ್ಬರ, ಸಸ್ಯ ಸಂಕ್ಷರಣಾ ಔಷಧಿ, ಸಸ್ಯ ಸಂಕ್ಷರಣಾ ಉಪಕರಣಗಳ ವಿತರಣೆ |
| 2 | ಎಣ್ಣೆಕಾಳು ಅಭಿವೃದ್ಧಿ ಯೋಜನೆ | 29.82 | 37.87 | 37.87 | ಶೇ 50 ರ ಸಹಾಯಧನದಲ್ಲಿ ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆ, ಜೈವಿಕ ಗೊಬ್ಬರ, ಸಸ್ಯ ಸಂಕ್ಷರಣಾ ಔಷಧಿ, ಸಸ್ಯ ಸಮಕ್ಷರಣಾ ಉಪಕರಣಗಳು, ಜಿಪ್ಸಂ ಹಾಗೂ ಲಘು ಪೋಷಾಕಾಂಶ ವಿತರಣೆ, |
| 3 | ಹನಿ ನೀರಾವರಿ | 10.00 | 257 | 257 | ಶೇ. 75 ರ ಸಹಾಯಧನದಲ್ಲಿ ತುಂತುರು ನೀರಾವರಿ ಉಪಕರಣಗಳ ವಿತರಣೆ |
| 4 | ರೈತ ಮಿತ್ರ ಯೋಜನೆ | 3.50 | - | - | ಖಾಸಗಿ ಕಟ್ಟಡದಲ್ಲಿ ಕಛೇರಿ ಕೆಲಸ ನಿರ್ವಹಿಸುವ ರೈತ ಸಂಪರ್ಕ ಕೇಂದ್ರಗಳಿಗೆ ಬಾಡಿಗೆ ನಿರ್ವಹಣಾ ವೆಚ್ಚ |
| 5 | ಜಿಲ್ಲಾ ಕೃಷಿ ತರಬೇತಿ ಕೇಂದ್ರ | 3.50 | 450 | 450 | ರೈತರುಗಳಿಗೆ ಕೃಷಿ ವಿಜ್ಞಾನ ಕೇಂದ್ರ/ ಜಿಲ್ಲಾ ತರಬೇತಿ ಕೇಂದ್ರಗಳಲ್ಲಿ 3 ದಿನ ಹಾಗೂ 5 ದಿನ ತರನೇತಿ ನೀಡುವುದು. |
| 6 | ಕೃಷಿ ಯಂತ್ರೋಕರಣ | 8.40 | 130 | 130 | ರೈತರಿಗೆ ಶೇ 50 ರ ಸಹಾಯಧನದಲ್ಲಿ ಪವರ್ ಟಿಲ್ಲರ್, ಹೈಟೆಕ್ ಕೃಷಿ ಯಂತ್ರೋಪಕರಣಗಳು, ಶಕ್ತಿ ಚಾಲಿತ ಸಸ್ಯ ಸಂಕ್ಷರಣಾ ಉಪಕರಣಗಳು, ಹಾಗೂ ಕೃಷಿಒ ಸಂಸ್ಕರಣ ಘಟಕಗಳ ವಿತರಣೆ |
| 7 | ಕೃಷಿ ಯಾಂತ್ರೀಕರಣ | 75.29 | 645 | 645 | ರೈತರಿಗೆ ಶೇ 50 ರ ಸಹಾಯಧನದಲ್ಲಿ ಪವರ್ ಟಿಲ್ಲರ್, ಹೈಟೆಕ್ ಕೃಷಿ ಯಂತ್ರೋಪಕರಣಗಳು, ಶಕ್ತಿ ಚಾಲಿತ ಸಸ್ಯ ಸಂಕ್ಷರಣಾ ಉಪಕರಣಗಳು, ಹಾಗೂ ಕೃಷಿಒ ಸಂಸ್ಕರಣ ಘಟಕಗಳ ವಿತರಣೆ |

.........9

| | | | | | |
|---|---|---|---|---|---|
| 8 | ಕುಯಿಲು/ಕಟಾವು ತಂತ್ರಜ್ಞಾನ | 1.60 | 320 | 320 | ಶೇ 50 ರಸಹಾಯಧನದಲ್ಲಿ ಟಾರ್ಪಾಲಿನ್‌ಗಳ ವಿತರಣೆ |
| 9 | ಸಾವಯವ ಗೊಬ್ಬರ | 6.00 | 324 | 324 | ಶೇ 50 ರಸಹಾಯಧನದಲ್ಲಿ ಕರ್ನಾಟಕ ಅಗ್ರಿಗೋಲ್ಡ್ ಸಾವಯವ ಗೊಬ್ಬರ ವಿತರಣೆ |
| 10 | ಸಸ್ಯ ಸಂರಕ್ಷಣಾ ಯೋಜನೆ | 8.00 | 1431 | 1431 | ಶೇ 50 ರ ಸಹಾಯಧನದಲ್ಲಿ ಸಸ್ಯ ಸಂಕ್ಷರಣಾ ಔಷಧಿ ಹಾಗೂ ಸಸ್ಯ ಸಂಕಷರಣಾ ಉಪಕರಣಗಳ ವಿತರಣೆ |
| 11 | ಕೃಷಿ ಮೇಳ ಮತ್ತು ವಸ್ತು ಪ್ರದರ್ಶನಗಳು | 1.00 | - | - | ಗ್ರಾಮಾಂತರ ಪ್ರದೇಶದಲ್ಲಿ ನೆರಯುವ ಜಾತ್ರೆಗಳಲ್ಲಿ ಇಲಾಖೆಯಿಂದ ಕೃಷಿ ವಸ್ತು ಪ್ರದರ್ಶನ ಏರ್ಪಡಿಸುವುದು |
| 12 | ವಿಶೇಷ ಘಟಕ ಯೋಜನೆ | 11.27 | 232 | 232 | ಶೇ 75 ರ ಸಹಾಯಧನ |
| 13 | ಗಿರಿಜನ ಉಪಯೋಜನೆ | 4.00 | 91 | 91 | ಶೇ 75 ರ ಸಹಾಯಧನ |

**ರಾಜ್ಯ ವಲಯ(2010–11)**

| ಕ್ರ. ಸಂ | ಯೋಜನೆಗಳು | ವಾರ್ಷಿಕ ಗುರಿ (ಆರ್ಥಿಕ) | ಭೌತಿಕ ಗುರಿ | ಫಲಾನುಭವಿಗಳ ಸಂಖ್ಯೆ | ಷರಾ |
|---|---|---|---|---|---|
| 1 | ಸಸ್ಯ ಸಂಕರಕ್ಷಣಾ ಯೋಜನೆ | 2.00 | 330 | 330 | ಶೇ 50 ರ ಸಹಾಯಧನದಲ್ಲಿ ಸಸ್ಯ ಸಂಕ್ಷರಣಾ ಔಷಧಿ ಹಾಗೂ ಸಸ್ಯ ಸಂಕಷರಣಾ ಉಪಕರಣಗಳ ವಿತರಣೆ |
| 2 | ಕೇಂದ್ರ ಪುರಸ್ಕೃತ ಹತ್ತಿ ಅಭಿವೃದ್ಧಿ ಯೋಜನೆ ಮಿನಿಮಿಷನ್–II | 0.34 | 60 | 60 | ಶೇ. 50 ರಸಹಾಯಧನದಲ್ಲಿ ಜೈವಿಕ ಪೀಡೆನಾಶಕ, ಸಸ್ಯ ಸಂಕ್ಷರಣೆ ಉಪಕರಣಗಳ ವಿತರಣೆ ಹಾಗೂ ರೈತರಿಗೆ ತರಬೇತಿ |
| 3 | ಕೃಷಿ ವಾರ್ತಾ ಘಟಕ | 1.30 | - | - | ತಾಂತ್ರಿಕ ಮಾಹಿತಿಯನ್ನು ಪ್ರಚಾರಪಡಿಸುವುದು |
| 4 | ಕೃಷಿಜಾತ್ರ ಮತ್ತು ವಸ್ತು ಪ್ರದರ್ಶನ | 0.20 | - | - | ಕೃಷಿ ವಸ್ತು ಪ್ರದರ್ಶನ ಏರ್ಪಡಿಸುವುದು |
| 5 | ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ (ದ್ವಿದಳ ಧಾನ್ಯಗಳು) ಎನ್.ಎಫ್.ಎಸ್.ಎಂ | 64.60 | 4928 | 4928 | ಶೇ 50 ರ ಸಹಾಯಧನದಲ್ಲಿ ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆ, ಜೈವಿಕ ಗೊಬ್ಬರ, ಸಸ್ಯ ಸಂಕ್ಷರಣಾ ಔಷಧಿ, ಸಸ್ಯ ಸಮಕ್ಷರಣಾ ಉಪಕರಣಗಳು, ಜಿಪ್ಸಂ ಹಾಗೂ ಲಘು ಪೋಷಾಕಾಂಶ ವಿತರಣೆ, |
| 6 | ಐಸೋಪಾಮ್ ಎಣ್ಣೆಕಾಳುಗಳು | 60.00 | 2771 | 2771 | ಶೇ 50 ರ ಸಹಾಯಧನದಲ್ಲಿ ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆ, ಜೈವಿಕ ಗೊಬ್ಬರ, ಸಸ್ಯ ಸಂಕ್ಷರಣಾ ಔಷಧಿ, ಸಸ್ಯ ಸಂಕ್ಷರಣಾ ಉಪಕರಣಗಳು, ಜಿಪ್ಸಂ ಹಾಗೂ ಲಘು ಪೋಷಾಕಾಂಶ ವಿತರಣೆ, |
| 7 | ಕೃಷಿ ಪ್ರಶಸ್ತಿ | 1.02 | 6 | 6 | ರೈತರಿಗೆ ಉತ್ಪಾದನಾ ಬಹುಮಾನ ನೀಡುವುದು |

.........10

| | | | | | |
|---|---|---|---|---|---|
| 8 | ಸಮಿತಿಗಳು ಮತ್ತು ಸಲಹೆಗಳು | 0.17 | - | - | ಚುನಾಯಿತ ಪ್ರತಿನಿಧಿಗಳಿಗೆ ಇಲಾಖಾ ಕಾರ್ಯಕ್ರಮಗಳನ್ನು ಪರಿಚಯಿಸುವುದು |
| 9 | ಕೃಷಿ ಯಾಂತ್ರೀಕರಣ ಕಾರ್ಯಕ್ರಮ | 62.83 | 313 | 313 | ರಿಯಾಯಿತಿ ದರದಲ್ಲಿ ಪವರ್ ಟಿಲ್ಲರ್, ಹೈಟೆಕ್ ಯಂತ್ರೋಪಕರಣ ನೀಡುವುದು |
| 11 | ಕಟ್ಟಡಗಳು ಮತ್ತು ಬಾಡಿಗೆ | - | - | - | ಖಾಸಗಿ ಕಟ್ಟಡಗಳಲ್ಲಿ ಕಛೇರಿ ಕೆಲಸ ನಿರ್ವಹಿಸುವ ಸಹಾಯಕ ಕೃಷಿ ನಿರ್ದೇಶಕರುಗಳ ಕಛೇರಿ ಬಾಡಿಗೆ |
| 12 | ವೈಟಪ್ | - | - | - | |
| 13 | ಕೃಷಿ ಸಂಸ್ಕರಣೆ ಮತ್ತು ಮಾರುಕಟ್ಟೆ ಸಂಪರ್ಕ | 7.15 | 22 | 22 | ಶೇ. 50ರ ರಿಯಾಯಿತಿ ದರದಲ್ಲಿ ಒಕ್ಕಣೆಕಣ ನಿರ್ಮಾಣ ಮತ್ತು ಸಂಸ್ಕರಣಾ ಘಟಕಗಳ ವಿತರಣೆ |

13) ಮಾಹಿತಿಯನ್ನು ಪ್ರಕಟಣೆ/ಸಿ.ಡಿ/ಪ್ಲಾಪಿ ರೂಪದಲ್ಲಿ ನೀಡಲಾಗುವುದು.

14) ನಾಗರೀಕರಿಗೆ ಮಾಹಿತಿ ಲಭ್ಯತೆ ವಿವರಗಳನ್ನು ಪ್ರಕಟಣೆಗಳ ಮೂಲಕ/ರೇಡಿಯೋ ಕಾರ್ಯಕ್ರಮಗಳ ಮೂಲಕ/ಯಂತ್ರದ ಆಧಾರಿತ ಕಾರ್ಯಕ್ರಮಗಳ ಮೂಲಕ/ಫೋನ್ ಇನ್ ಕಾರ್ಯಕ್ರಮಗಳ ಮೂಲಕ ಒದಗಿಸಲಾಗುವುದು.

15) ನಾಗರೀಕರಿಗೆ ಮಾಹಿತಿ ಲಭ್ಯತೆ ವಿವರಗಳನ್ನು ಗ್ರಂಥಾಲಯ ಓದುಗರ ಕೊಠಡಿಯಲ್ಲಿಡಲು ಕ್ರಮ ಕೈಗೊಳ್ಳಲಾಗುವುದು.

16) ಸಾರ್ವಜನಿಕ ಮಹಿತಿ ಅಧಿಕಾರಿಗಳ ಹೆಸರು ಮತ್ತು ವಿವರಗಳು

| | | |
|---|---|---|
| 1 | ಸಾರ್ವಜನಿಕ ಮಾಹಿತಿ ಅಧಿಕಾರಿ | ಸಹಾಯಕ ಕೃಷಿ ನಿರ್ದೇಶಕರು(ಕೇಂದ್ರ), ಜಂಟಿ ಕೃಷಿ ನಿರ್ದೇಶಕರ ಕಛೇರಿ, ಚಾಮರಾಜನಗರ. |
| 2 | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಆಡಳಿತಾಧಿಕಾರಿ, ಜಂಟಿ ಕೃಷಿ ನಿರ್ದೇಶಕರ ಕಛೇರಿ, ಚಾಮರಾಜನಗರ. |
| 3 | ಮೇಲ್ಮನವಿ ಪ್ರಾಧಿಕಾರ | ಜಂಟಿ ಕೃಷಿ ನಿರ್ದೇಶಕರು.ಚಾಮರಾಜನಗರ. |

17) **ಇತರ ನಿರ್ಧಿಷ್ಟಪಡಿಸಿದ ಮಾಹಿತಿಗಳು.**

1) ಸಹಾಯಕ ಕೃಷಿ ನಿರ್ದೇಶಕರು, ಚಾಮರಾಜನಗರ
2) ಸಹಾಯಕ ಕೃಷಿ ನಿರ್ದೇಶಕರು, ಯಳಂದೂರು.
3) ಸಹಾಯಕ ಕೃಷಿ ನಿರ್ದೇಶಕರು, ಕೊಳ್ಳೇಗಾಲ.
4) ಸಹಾಯಕ ಕೃಷಿ ನಿರ್ದೇಶಕರು, ಗುಂಡ್ಲುಪೇಟೆ.

ಜಂಟಿ ಕೃಷಿ ನಿರ್ದೇಶಕರು,
ಚಾಮರಾಜನಗರ.

♣♣♣♣